ಮಾದೇವಿ ಸಂತಸದಿಂದ ಕಣ್ಣೊರೆಸಿಕೊಳ್ಳುತ್ತ, 'ಗುಡೀರವ್ವಂಗೆ ಹರಕೆ ಕಟ್ಕೊಂಡಿವ್ನಿ ಮಗಾ. ನಿನ್ನ ಸಂಬಳ ಬಂದ ತಕ್ಷಣಾ ಹರಕೆ ತೀರುಸ್ಬೇಕು. ಅದೂ ಅಮಾಸೆ ಒಳ್ಗಡೆನೇ ಆಗಬೇಕು'ಎಂದಳು. ಅವನೋ.. 'ಈಗ ಸೇರ್ಕೊಂಡಿದೀನಿ. ಮೂರು ತಿಂಗಳು ಟ್ರೇನಿಂಗ್‌ನಲ್ಲಿ ಸಂಬಳ ಕೊಡಲ್ವಂತೆ. ಅದು ಮುಗದ್ ಮ್ಯಾಕೆ ಎಲ್ಲಾ ಕೂಡಿಸಿ ಕೊಡ್ತಾರಂತೆ. ಅಲ್ಲಿಗಂಟಾ ನೀನೇ ಕಳಸು'ಎಂದವನೇ ಹೊರಟು ಹೋದ. ಮಾದೇವಿಗೆ ಚಿಂತೆ. 'ಅಮಾಸೆವಳ್ಗೆ ಪೂಜೆ ಮಾಡಿ ಹರಕೆ ತೀರಿಸ್ಬೇಕು'ಎಂದು ಒದ್ದಾಡಿದಳು. ಯಥಾಪ್ರಕಾರ ಗೌಡತಿ ಏನೂ ಕೊಡಲಿಲ್ಲ. 'ಸಂಬಳ ಕೊಡಾದೇ ಹೆಚ್ಚು. ಸಾಲ ಎಲ್ಲಿಂದ ಕೊಟ್ಟಾತು. ನಿನ್ನ ಗಂಡ ಸೋಜಪ್ಪನ ತಾವ ಈಸ್ಕೊತಾವ್ನಂತೆ. ಅಲ್ಲೇ ಹೋಗಿ ಕೇಳಾಕೆ ಹೇಳು'ಎಂದು ವ್ಯಂಗ್ಯವಾಗಿ ಚುಚ್ಚಿಯೇ ಕಳಿಸಿದ್ದಳು. ಹಳ್ಳಿಜನರಿಗೆ ವಿಷಯ ತಿಳಿಯುತ್ತಿದೆ ಎಂದಾಗ ಮಾದೇವಿ ಮತ್ತೆ ಕಳವಳಗೊಂಡಳು. ಬೇರೆ ಉಪಾಯವಿಲ್ಲದೇ ನಂಜುಂಡ ದೇವಪ್ಪನನ್ನು ಕರೆದುಕೊಂಡು ಸೋಜಪ್ಪನ ಬಳಿ ಹೊರಟ. ಮಾದೇವಿಯೂ ಬದಲು ಹೇಳಲಿಲ್ಲ.

ಸೋಜಪ್ಪ ಇವರನ್ನು ಒಳಗೆ ಕರೆದು ವಿಷಯ ತಿಳಿದುಕೊಂಡರು. 'ನಿಮ್ ಹಳೆಯ ಬಾಕಿ ಮೂರು ಸಾವ್ರ ತೀರ್ಸಾಕಾಗಿಲ್ಲ ಸೋಮಿ. ಕೆಲಸಾನೇ ಇಲ್ಲದೇ ಕಷ್ಟಾ ಆಗದೆ. ಈಗ ಮತ್ತೆ ಕೇಳಾಕೆ ಬಂದಿವ್ನಿ. ಗುಡೀರವ್ವನ ಹರಕೆ ತೀರುಸ್ಬೇಕು'ಎಂದ. ಸೋಜಪ್ಪ ನಗುತ್ತ, 'ದೇವರೆಲ್ಲ ಒಂದೇ ನಂಜುಂಡ. ನಮ್ಮ ಏಸು ಸ್ವಾಮಿಯಾದರೇನು.. ಗುಡೀರವ್ವನಾದರೇನು? ಹೋಗಿ ಮೊದಲು ಹರಕೆ ತೀರಿಸಿ'ಎಂದು ಸಾವಿರ ರೂ. ಕೈಗಿತ್ತರು. 'ಕೆಲಸಾ ಸಿಕ್ಕ ತಕ್ಷಣ ದುಡ್ಡು ತಕಂಬರ್ತೀನಿ ಸೋಮಿ'ಎಂದು ಕೈಮುಗಿದ ನಂಜುಂಡ. 'ಪರವಾಗಿಲ್ಲ ನಂಜುಂಡ. ನೀವಿಬ್ಬರೂ ಚರ್ಚಿಗೆ ಬನ್ನಿ. ಗಾರೆ ಕೆಲಸ ಇದೆ. ಮಾಡ್ಕೊಡಿ' ಎಂದರು. ಇಬ್ಬರಿಗೂ ಪ್ರಾರ್ಥನೆ ಹೇಳಿಕೊಟ್ಟರು. ಇಬ್ಬರೂ ಪ್ರಾರ್ಥನೆ ಮಾಡಿ ಹೊರಬಂದರು. ಹೊಸ ಸೀರೆ ಇಟ್ಟು..ಪೂಜೆ ಮಾಡಿ ಗುಡೀರವ್ವನ ಹರಕೆ ತೀರಿಸಿದ್ದಾಯಿತು. ಬಸನಿಂಗನೂ ಪೂಜೆಗೆ ಬಂದು ಅಂದೇ ಹೊರಟ. ಮಾದೇವಿ ನಿಸೂರಾದಳು. ನಂಜುಂಡ ದೇವಪ್ಪನ ಜೊತೆಗೂಡಿ ಚರ್ಚಿಗೆ ಹೋದ. ಇಬ್ಬರೂ ಸೇರಿ ಇದ್ದಬದ್ದ ಗಾರೆ ಕೆಲಸವನ್ನೂ ಮುಗಿಸಿದರು. ಸೋಜಪ್ಪ ಊಟ ಕೊಟ್ಟು ಮೇಲೆ ಕೆಲಸಕ್ಕೆ ಕೂಲಿಯನ್ನೂ ಕೊಟ್ಟರು. ನಂಜುಂಡ ಅದೇ ಹಣವನ್ನು ಸಾಲಕ್ಕೆಂದು ತಿರುಗಿ ಕೊಡಲು ಹೋದಾಗ, 'ಅವಸರವಿಲ್ಲ.. ನಿನಗೆ ಕೆಲಸವಿದ್ದಾಗ ಕೊಡುವಿಯಂತೆ'ಎಂದರು. ಅಲ್ಲದೇ, 'ನಿಮಗಿಷ್ಟವಾಗಿದ್ದಲ್ಲಿ ನಮ್ಮ ಧರ್ಮಕ್ಕೆ ಸೇರಿಕೊಳ್ಳಿ. ಪ್ರತಿ ತಿಂಗಳೂ ಒಂದು ಸಾವಿರ ರೂ. ಕೊಡ್ತೇವೆ. ಮತ್ತೆ ಕಷ್ಟಕ್ಕೆಲ್ಲ ಸಹಾಯ ಮಾಡ್ತೇವೆ. ಆಗಾಗ ಬಕ್ಷೀಸೂ ಇರುತ್ತೆ. ಒತ್ತಾಯವಿಲ್ಲ'ಎಂದರು. ಇಬ್ಬರೂ ಪ್ರಾರ್ಥನೆ ಮಾಡಿ ಹಣೆಗೆ ಕ್ರಾಸ್ ಮಾಡಿಕೊಂಡು ಹೊರಟಾಗ ಸೋಜಪ್ಪ, 'ಭಾನುವಾರ ಬೆಳಿಗ್ಗೆ ಬನ್ನಿ'ಎಂದು ಹೇಳಿ



ಮೇಲೆ ಮಾಮೂಲಿನಂತೆ ಬಕ್ಷೀಸನ್ನೂ ಕೊಟ್ಟರು. ಅದು ಖಾಲಿಯೂ ಆಯಿತು.

ಮಾದೇವಿ ನಂಜುಂಡನ ಬರವನ್ನೇ ಕಾಯುತ್ತಿದ್ದಳು. 'ವಾರಿಜಕ್ಕ ಸಿಕ್ಕಿದ್ದಳು. ದೊಡ್ಡ ಸೋಮಿಗೋಳು ಚರ್ಚಿಗೆ ಬತ್ತಾವ್ರಂತೆ. ಇನ್ ಮ್ಯಾಕೆ ಹಿಂಗೆ ಇರಾಕಾಗ್ದು ಅಂದ್ರಂತೆ ಸೋಜಪ್ಪ. ಭಾನುವಾರದ ಪ್ರಾರ್ಥನೆಗೆ ಬರಲೇಬೇಕು. ಉಳಿದದ್ದೆಲ್ಲಾ ಬಿಟ್ಟುಬಿಡಬೇಕು ಅಂದ್ರಂತೆ. ನಿಂಗೂ ಅದೇ ಯೋಳಿದ್ರಾ?'ಎಂದು ದಿಗಿಲಿನಿಂದಲೇ ಕೇಳಿದಳು. 'ಇಲ್ಲ.. ಬರೀ ಬಾ ಅಂದವ್ರೆ' ಎಂದವ ಸುಮ್ಮನಾದ. ಶನಿವಾರವೇ ದೊಡ್ಡ ಕೆಲಸ ಬಂತೆಂದು ಮೇಸ್ತ್ರಿ ಇವರನ್ನೆಲ್ಲ ಬಟ್ಟೆಬರೆಗಳೊಂದಿಗೆ ಲಾರಿ ಹತ್ತಿಸಿಕೊಂಡು ಹೋದ. ವಾರವಾದರೂ ನಂಜುಂಡ,